# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 17(115) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ವೈ.ಎಂ ಸತೀಶ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 05.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1 | ಬಳ್ಳಾರಿ ಜಿಲ್ಲೆಯ ಕುಡುತಿನಿ, ವೇಣಿವೀರಾಪುರ, ಹರಗಿನ ಡೋಣಿ, ಜಾನೆಕುಂಟೆ, ಸಿರವಾರ, ಕೊಳಗಲ್ಲು, ಯರಂಗಳ್ಳಿ ಗ್ರಾಮಗಳ ಸುತ್ತ 2010 ರಿಂದ 2013 ರವರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ (ಕೆಐಎಡಿಬಿ) ಮಂಡಳಿಯು ಎಷ್ಟು ಎಕರೆ ಭೂಮಿಯನ್ನು ಯಾವ ಉದ್ದೇಶಕ್ಕೆ ಸ್ವಾಧೀನ ಪಡಿಸಿಕೊಂಡಿದೆ; (ವಿವರ ನೀಡುವುದು) | 2010 ರಿಂದ 2013 ರವರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ (ಕೆಐಎಡಿಬಿ) ಮಂಡಳಿಯಿಂದ ಬಳ್ಳಾರಿ ಜಿಲ್ಲೆಯ ಕುಡಿತಿನಿ, ವೇಣಿ ವೀರಾಪುರ ಹಾಗೂ ಹರಗಿನ ಡೋಣಿ ಗ್ರಾಮಗಳಲ್ಲಿ ಒಟ್ಟು 5368.83 ಎಕರೆ ಜಮೀನನ್ನು **M/s.Arcelor Mittal India Ltd.,** ಇವರ "6 Million TPA integrated Steel Plant ಮತ್ತು 750 MW Power Generation Plant" ಉದ್ದೇಶಕ್ಕಾಗಿ ಹಾಗೂ ಬಳ್ಳಾರಿ ಜಿಲ್ಲೆ ಸಿರಿವಾರ ಮತ್ತು ಚಾಗನೂರು ಗ್ರಾಮಗಳಲ್ಲಿ ಒಟ್ಟು 900.96 ಎಕರೆ ಜಾಗವನ್ನು ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ಮತ್ತು ಕುಡಿತಿನಿ, ವೇಣಿ ವೀರಾಪುರ, ಕೊಳಗಲ್ಲು, ಯರಂಗಳ್ಳಿ ಗ್ರಾಮಗಳಲ್ಲಿನ ಒಟ್ಟು 4950.61 ಎಕರೆ ಜಮೀನನ್ನು M/s.Uttam Galva Ferrous Ltd.,ಇವರ "Integrated Steel Plant" ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. |
| 2 | ಈ ಭೂಮಿಯನ್ನು ಯಾವ ಯಾವ ಕಂಪನಿಗಳಿಗೆ ಎಷ್ಟು ಎಷ್ಟು ಹಂಚಿಕೆ ಮಾಡಲಾಗಿದೆ; ಅದರಲ್ಲಿ ಎಷ್ಟು ಕಂಪನಿಗಳು ಕೈಗಾರಿಕೆ ಗಳನ್ನು ಸ್ಥಾಪಿಸಿರುತ್ತವೆ; (ವಿವರ ನೀಡುವುದು) | **M/s.Arcelor Mittal India Ltd.,** ಇವರ ಯೋಜನೆಗಾಗಿ ಸ್ವಾಧೀನಪಡಿಸಲಾದ ಜಮೀನಿನ ಪೈಕಿ ಈವರೆಗೆ 2659.75 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ.<br><br>ಬಳ್ಳಾರಿ ವಿಮಾನ ನಿಲ್ದಾಣ ಅಭಿವೃದ್ಧಿಗೋಸ್ಕರ ಸ್ವಾಧೀನಪಡಿಸಿದ ಜಮೀನಿನ ಪೈಕಿ ಈವರೆಗೆ 806.34 ಎಕರೆ ವಿಸ್ತೀರ್ಣವನ್ನು ತಹಶೀಲ್ದಾರ್, ಬಳ್ಳಾರಿ ತಾಲ್ಲೂಕು ಇವರಿಗೆ ಹಸ್ತಾಂತರ ಮಾಡಲಾಗಿದ್ದು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ವತಿಯಿಂದ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಬೇಕಾಗಿದೆ.<br><br>**M/s.Uttam Galva Ferrous Ltd.,**ಇವರ ಯೋಜನೆಗಾಗಿ ಭೂಸ್ವಾಧೀನಪಡಿಸಿದ ಜಮೀನಿನ ಪೈಕಿ 4877.81 ಎಕರೆ ವಿಸ್ತೀರ್ಣವನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ.<br><br>ಜಮೀನು ಹಂಚಿಕೆ ಪಡೆದ ಯೋಜನಾ ಪ್ರವರ್ತಕರು/ಸಂಸ್ಥೆಗಳು ಈವರೆಗೂ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದಿಲ್ಲ. |

| | | |
|---|---|---|
| | | ಮೇಲ್ಕಂಡಂತೆ, ಸ್ವಾಧೀನಪಡಿಸಲಾದ ಜಮೀನಿನ ಪೈಕಿ M/s.Arcelor Mittal India Ltd., ಯೋಜನೆಗೆ ಸಂಬಂಧಿಸಿದ ಭೂಮಾಲೀಕರು ಹೆಚ್ಚುವರಿ ಭೂಪರಿಹಾರ ಕೋರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದು, ಪ್ರಸ್ತುತ ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ.<br><br>ಬಳ್ಳಾರಿ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯವನ್ನು ಪ್ರಸ್ತುತ ಕರ್ನಾಟಕ ಕೈಗಾರಿಕೆ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುತ್ತಿದೆ.<br><br>**M/s.Uttam Galva Ferrous Ltd** ಇವರ ಯೋಜನೆಯನ್ನು ಅನುಷ್ಠಾನಗೊಳಿಸಲು **MOEF** ನಿಂದ **Environmental Clearance** ಈವರೆಗೂ ದೊರೆಯದೇ ಇರುವುದು ಮತ್ತು ಕೆಲವು ಜಮೀನಿನ ಭೂಮಾಲೀಕರು ಸಿವಿಲ್ ನ್ಯಾಯಾಲಯದಲ್ಲಿ ಭೂಪರಿಹಾರಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿರುವುದು ಇತ್ಯಾದಿ ಕಾರಣಗಳಿಂದ ಯೋಜನೆಯ ಸಂಪೂರ್ಣ ಅನುಷ್ಠಾನಕ್ಕಾಗಿ ಹೆಚ್ಚುವರಿ 6 ವರ್ಷ ಕಾಲಾವಕಾಶ ಕೋರಿರುತ್ತಾರೆ. ಕಂಪೆನಿಯ ಮನವಿಯ ಬಗ್ಗೆ ಮುಂದಿನ ರಾಜ್ಯ ಉನ್ನತ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸೂಕ್ತ ನಿರ್ಣಯವನ್ನು ಕೈಗೊಳ್ಳಲಾಗುತ್ತದೆ. |
| 3 | ಇಲ್ಲಿನ ಸ್ಥಳೀಯ ರೈತರು ಹಾಗೂ ಸಾರ್ವಜನಿಕರು ಧರಣಿ ನಡೆಸಿರುವುದು ನಿಜವೇ; ಹಾಗಿದ್ದಲ್ಲಿ, ಈ ಧರಣಿಗೆ ಕಾರಣಗಳೇನು; ರೈತರ ಮನವಿಗಳನ್ನು ಈಡೇರಿಸಲು ಸರ್ಕಾರದ ಕ್ರಮಗಳೇನು? (ವಿವರ ನೀಡುವುದು) | ಭೂಸ್ವಾಧೀನವಾಗಿ 10 ರಿಂದ 13 ವರ್ಷ ಗತಿಸಿದರೂ ಸಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡದೇ ಇರುವುದರಿಂದ, ಭೂಸಂತ್ರಸ್ತರು ಉದ್ಯೋಗ ವಂಚಿತರಾಗಿರುವುದಾಗಿ ಹಾಗೂ ಭೂಪರಿಹಾರ ನೀಡಿರುವುದು ಕಡಿಮೆಯಾಗಿರುವುದಾಗಿ, ಧರಣಿಯನ್ನು ನಡೆಸುತ್ತಿರುತ್ತಾರೆ.<br><br>ಭೂಪರಿಹಾರ ಕುರಿತಾದ ಪ್ರಕರಣ ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಮಾನ್ಯ ನ್ಯಾಯಾಲಯದ ಅಂತಿಮ ಆದೇಶದಂತೆ ಮುಂದಿನ ಕ್ರಮ ವಹಿಸಲಾಗುತ್ತದೆ. |

**ಸಂಖ್ಯೆ: ಸಿಐ 300 ಐಎಪಿ 2023**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**